ಇವುಗಳ ಕೆಲಸಗಳು ಮುಗಿದಿದ್ದು ಶಾಲೆಯ ಲೈನಿಂಗ್ ಕಾರ್ಯವು ಮುಗಿಯುವ ಹಂತದಲ್ಲಿದೆ. ರೈಸಿಂಗ್ ಮೈನ್ ಮತ್ತು ಯಂತ್ರೋಪಕರಣಗಳನ್ನು ಜೋಡಣೆ ಮಾಡಬೇಕಾಗಿದೆ. ಸದರಿ ಯೋಜನೆಯನ್ನು 1994–95ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) ಮೂಲ ಅಂದಾಜಿನಲ್ಲಿ 1500 ಎಕರೆ ಆಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸಲು ಯೋಜಿಸಲಾಗಿದ್ದು ನಂತರ ಸ್ಥಳೀಯರ ಮನವಿಯ ಮೇರೆಗೆ ಪರಿಶೀಲಿಸಿ 250 ಎಕರೆ ಆಚ್ಚುಕಟ್ಟನ್ನು ಈ ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ ಅಳವಡಿಸಲಾಯಿತು. ಈ ಕಾರಣದಿಂದ ಮೂಲ ಯೋಜನೆಯಲ್ಲಿ ಮಂಜೂರಾಗಿದ್ದ ನೀರೆತ್ತುವ ಪಂಪಿನ ಸಾಮರ್ಥ್ಯ, ರೈಸಿಂಗ್ ಮೈನ್, ನಾಲೆಯ ಸೆಕ್ಷನ್‌ಗಳನ್ನು ಬದಲಾಯಿಸಬೇಕಾಗಿ ಬಂದು 250 ಎಕರೆ ಹೆಚ್ಚುವರಿ ಆಚ್ಚುಕಟ್ಟಿಗೆ ನೀರು ಸರಬರಾಜು ಮಾಡಲು ಒಂದು ಉಪನಾಲೆಯ ಅವಶ್ಯಕತೆ ಕಂಡುಬಂದಿತು. ಈ ಮೇಲೆ ನಮೂದಿಸಿರುವ ಕಾರಣಗಳಿಂದ ಮತ್ತು ವಿನ್ಯಾಸಗಳನ್ನು ಬದಲಾಯಿಸಬೇಕಾಗಿ ಬಂದುದರಿಂದ ಕಾಮಗಾರಿಯ ಪ್ರಗತಿಯು ಧಾನವಾಯಿತು.

ವಿ.ಸಿ. ನಾಲೆಯ ಆಧುನೀಕರಣ

72 (825) ಶ್ರೀ ಎಮ್.ಎಸ್. ಆತ್ಮಾನಂದ (ಮಂಡ್ಯ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿ.ಸಿ. ನಾಲಾ ಆಧುನೀಕರಣದ ಯೋಜನೆಯ ಉದ್ದೇಶಿತ 2ನೇ ಹಂತದ ಕಾಮಗಾರಿಯ ಪ್ರಸ್ತಾವೆಯನ್ನು ರೈತರ ಹಿತದೃಷ್ಟಿಯಿಂದ ಕಾರ್ಯಗತ ಮಾಡಬೇಕಾಗಿರುವ ಅವಶ್ಯಕ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿ.ಸಿ. ನಾಲಾ ಆಧುನೀಕರಣದ ಯೋಜನೆಯ ಉದ್ದೇಶಿತ 2ನೇ ಹಂತದ ಅನುಷ್ಠಾನದ ಬಗ್ಗೆ ಸರ್ಕಾರವು ಈವರೆಗೆ ಕೈಗೊಂಡ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು

ಆ) ವಿ.ಸಿ. ನಾಲೆಯ ಆಧುನೀಕರಣದ ಎರಡನೇ ಹಂತದ ಅಂಗವಾಗಿ ಹೊಳಲು ಮತ್ತು ಮಾರ್ಕಾಲು ಪಿಕ್‌ಅಪ್ ಮತ್ತು ನಾಲೆಗಳ ಅಭಿವೃದ್ಧಿ ಕೆಲಸವನ್ನು ಪ್ರಾರಂಭಿಸಲಾಗಿದೆ.

ಮಂಗಳ ಜಲಾಶಯಕ್ಕೆ ಬಾಗಿಲುಗಳನ್ನು ಅಳವಡಿಸದಿರುವುದು

75 (449) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಣಿಗಲ್ ತಾಲ್ಲೂಕಿನ ಮಂಗಳ ಜಲಾಶಯಕ್ಕೆ ಬಾಗಿಲುಗಳನ್ನು ಅಳವಡಿಸುವ ಕಾರ್ಯ ಸುಮಾರು ಒಂದು ದಶಕದಿಂದ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಬಾಗಿಲುಗಳನ್ನು ಅಳವಡಿಸುವ ಕೆಲಸ ಪೂರ್ಣಗೊಂಡರೆ ಎಷ್ಟು ಎಕರೆ ಜಮೀನಿಗೆ ನೀರು ಒದಗಿಸಲು ಸಾಧ್ಯವಾಗುತ್ತದೆ;

ಇ) ಇನ್ನೂ ಎಷ್ಟು ದಿನಗಳಲ್ಲಿ ಈ ಕೆಲಸ ಮುಗಿಸಿ ರೈತರಿಗೆ ನೀರು ಒದಗಿಸಲು ಸಾಧ್ಯವಾಗುತ್ತದೆ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಬಂದಿದೆ

ಆ) ಹಾಲಿ ಇರುವ 2320 ಎಕರೆ ಜೊತೆಗೆ 1720 ಎಕರೆ ಹೆಚ್ಚಿನ ಅಚ್ಚುಕಟ್ಟಿಗೆ ನೀರೊದಗಿಸಲು ಸಾಧ್ಯವಾಗುತ್ತದೆ.

ಇ) ಅನುದಾನದ ಲಭ್ಯತೆ ಮೇರೆಗೆ ಶೀಘ್ರವಾಗಿ ಕೆಲಸ ಮುಗಿಸಿ ಮುಂದಿನ ಮುಂಗಾರಿನಲ್ಲಿ ನೀರೊದಗಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಉಚಿತ ಕಾನೂನು ನೆರವು

76 (136) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಉಚಿತ ಕಾನೂನು ನೆರವು ಯೋಜನೆ ಜಾರಿಗೆ ಯಾವಾಗ ಬಂತು ಹಾಗೂ ಇದರಿಂದಾಗಿ ರಾಜ್ಯದಲ್ಲಿ ಎಷ್ಟು ಜನರಿಗೆ ಅನುಕೂಲವಾಗಿರುತ್ತದೆ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆಯಿಂದ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು;

ಇ) ಈ ಯೋಜನೆಯನ್ನು ಇನ್ನೂ ವ್ಯಾಪಕಗೊಳಿಸಲು ಸರ್ಕಾರವು ಕೈಗೊಂಡ ಕಾರ್ಯಕ್ರಮಗಳೇನು ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು):–

ಅ) ರಾಜ್ಯದಲ್ಲಿ ಕಾನೂನು ನೆರವು ಯೋಜನೆಯು 1977ನೇ ಸಾಲಿನಿಂದ ಜಾರಿಗೆ ಬಂದಿದೆ. 1977–78ನೇ ಸಾಲಿನಿಂದ ಡಿಸೆಂಬರ್ 1992ರ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು 6,28,943 ಜನಗಳು ಕಾನೂನು ನೆರವು ಕಾರ್ಯಕ್ರಮಗಳಿಂದ ಪ್ರಯೋಜನವನ್ನು ಪಡೆದಿರುತ್ತಾರೆ.

ಆ) 15,174

ಇ) ಕಾನೂನು ನೆರವು ಯೋಜನೆಗಳನ್ನು ವ್ಯಾಪಕಗೊಳಿಸುವ ಸಲುವಾಗಿ ಜನತಾ ನ್ಯಾಯಾಲಯದ ಅಡಿಯಲ್ಲಿ ವಾಹನ ಅಪಘಾತ ಸಿವಿಲ್ ಕ್ರಿಮಿನಲ್ ಪ್ರಕರಣಗಳಂತೆ ಬ್ಯಾಂಕ್ ಸ್ಯೂಟ್‌ಗಳು, ಕಾರ್ಮಿಕ ವಿವಾದಗಳು, ಭೂ ಸ್ವಾಧೀನ ಪ್ರಕರಣಗಳು ಮುಂತಾದ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗುತ್ತಿದೆ. ಅಲ್ಲದೆ ಕೌಟುಂಬಿಕ ನ್ಯಾಯಾಲಯ ಮತ್ತು ಸೇವೆಗಳ ಪ್ರಕರಣಗಳಲ್ಲಿಯೂ ಸಹ ಕಾನೂನು ನೆರವು ನೀಡಲು ವಿಚಾರ ಮಾಡುವ ಸಲುವಾಗಿ ವಿಚಾರ ಸಂಕೀರ್ಣ (ಸೆಮಿನಾರ್ಸ್) ವರ್ಕ್ಸ್ ಶಾಪ್ಸ್ ಮತ್ತು ಶಿಬಿರಗಳನ್ನು ಪ್ರಾರಂಭಗೊಳಿಸಲಾಗಿದೆ. ಅವುಗಳಲ್ಲಿ ಕಾನೂನು ಕಾಲೇಜುಗಳ ವಿದ್ಯಾರ್ಥಿಗಳು ಸಹ ಭಾಗವಹಿಸುತ್ತಿದ್ದಾರೆ. ಹಾಗೂ ಉಚಿತ ಕಾನೂನು ನೆರವು ನೀಡಲಾಗುತ್ತಿರುವ ವಿಷಯದ ಪ್ರಚಾರಕ್ಕಾಗಿ ಕಾನೂನು ವಿದ್ಯಾಪ್ರಸಾರ ಕಾರ್ಯಕ್ರಮದ ಅಡಿಯಲ್ಲಿ ವಿವಿಧ ಕಾನೂನು ವಿಷಯಗಳ ಬಗ್ಗೆ ಕಿರುಹೊತ್ತಿಗೆ (ಕರಪತ್ರ) ಗಳನ್ನು ಸಾರ್ವಜನಿಕರಿಗೆ ಹಂಚಲಾಗುತ್ತಿದೆ. ಮತ್ತು ದೂರದರ್ಶನ, ಆಕಾಶವಾಣಿ ಮೂಲಕ ಕಾನೂನು ವಿಷಯಗಳಲ್ಲಿ ಪ್ರಸಾರ ಮಾಡಲಾಗುತ್ತಿದೆ.